ಈ) ದಿನಾಂಕ: 5.8.2010ರಂದು ಮಾನ್ಯ ಲೋಕೋಪಯೋಗಿ ಸಚಿವರ ಪ್ರಗತಿ ಪರಿಶೀಲನಾ ಸಭೆಯಲ್ಲಿ ನೀಡಿದ ಸೂಚನೆಯಂತೆ 2010–11ನೇ ಸಾಲಿನಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ Phase-II, III ಮತ್ತು IVರಲ್ಲಿ ಕೈಬಿಡಲಾದ ಸೇತುವೆಗಳ ಪಟ್ಟಿಯಲ್ಲಿ ಆದ್ಯತೆಯ ಮೇರೆಗೆ ಕೈಗೊಳ್ಳಬೇಕಾಗಿರುವ ಆದ್ಯತಾ ಪಟ್ಟಿಯಲ್ಲಿ ಹಾಗೂ ಕೈಬಿಡಲಾದ ಸೇತುವೆಗಳನ್ನು ಹೊರತುಪಡಿಸಿ ಅತಿ ಅವಶ್ಯಕವೆನಿಸಿದ ಹೆಚ್ಚುವರಿ ಸೇತುವೆಗಳ ಪಟ್ಟಿಯನ್ನು ತಯಾರಿಸಲಾಗಿದ್ದು, ಇದಕ್ಕೆ ಹೆಚ್ಚುವರಿಯಾಗಿ 353.00 ಕೋಟಿ ರೂ.ಗಳ ಅನುದಾನದ ಅವಶ್ಯಕತೆ ಇರುತ್ತದೆ. ಸದರಿ ಪಟ್ಟಿಯಲ್ಲಿ 9 ಸೇತುವೆ ಕಾಮಗಾರಿಗಳೂ ಸಹ ಸೇರ್ಪಡೆಯಾಗಿದ್ದು, ಈ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಉ) ಅನುದಾನದ ಲಭ್ಯತೆಯ ನಂತರ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಸೇತುವೆಗಳ ನಿರ್ಮಾಣ

291 (294) ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಗಡಿನಾಡು ಸಭೆಯಲ್ಲಿ 15 ಕಿ.ಮೀ. ರಸ್ತೆಯ ಗಂಗೋಡ–ಕೂಡಲಗಾವ್–ಮಾಲಾಂಭ–ಅಮ್‌ಸೇತ್–ರಾಮನಗರ ರಸ್ತೆ ಕುಂಡಲ್ ಸೇತುವೆ ನಿರ್ಮಾಣ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡುವುದಾಗಿ ಸಚಿವರು ಭರವಸೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಭರವಸೆ ನೀಡಿದಂತೆ ಹಣ ಬಿಡುಗಡೆ ಮಾಡದಿರಲು ಕಾರಣಗಳೇನು ;

ಇ) ಸದರಿ ತಾಲ್ಲೂಕಿನ ಕಾಮಗಾರಿಗಳಿಗಾಗಿ ಅಗತ್ಯವಿರುವ ಅನುದಾನವನ್ನು ಸರ್ಕಾರ ಕ್ರಮ ಕೈಗೊಳ್ಳುವುದೇ ;

ಈ) ಹಾಗಿದ್ದಲ್ಲಿ, ಅನುದಾನ ಬಿಡುಗಡೆಗೆ ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ ;

ಉ) ಹಾಗಿದ್ದಲ್ಲಿ, ಈ ರಸ್ತೆಗಳು ಯಾವಾಗ ದುರಸ್ತಿಗೊಳಿಸಲಾಗುವುದು ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ಮತ್ತು ಆ) ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಗಂಗೋಡ ರಸ್ತೆ ಹಾಗೂ ಕೂಡಲ್‌ಗಾಂವ್–ಮಾಲಾಂಭ–ಅಮ್‌ಸೇತ್–ರಾಮನಗರ ರಸ್ತೆ ಜಿಲ್ಲಾ ಪಂಚಾಯತ್ ರಸ್ತೆಯಾಗಿದ್ದು, ಕೂಡಲ್‌ಘಾಟ್ ರಸ್ತೆ ಕಿ.ಮೀ. 6.00ರಲ್ಲಿ ಸೇತುವೆ ನಿರ್ಮಾಣ ಮಂಜೂರಾಗಿರುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ (2010–11) ಜೋಯಿಡಾ ತಾಲ್ಲೂಕಿನಲ್ಲಿ ವಿವಿಧ ಕಾರ್ಯಕ್ರಮಗಳಡಿ ಕೈಗೊಂಡಿರುವ ಕಾಮಗಾರಿಗಳ ವಿವರಗಳು ಕೆಳಗಿನಂತಿವೆ.

ಕ್ರ. ಸಂ.	ಕಾರ್ಯಕ್ರಮದ ಹೆಸರು	ಒಟ್ಟು ಕಾಮಗಾರಿಗಳು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಪ್ರಸಕ್ತ ಅನುದಾನ (ರೂ.ಲಕ್ಷಗಳಲ್ಲಿ)	ಷರಾ
1	5054 ಸುವರ್ಣ ರಸ್ತೆ	1	39.06	19.53	ಕಾಮಗಾರಿ ಪ್ರಗತಿಯಲ್ಲಿದೆ
2	5054 ಡಾ: ಡಿ.ಎಂ. ನಂಜುಂಡಪ್ಪ ವರದಿ	3	129.37	129.37	2 ಕೆಲಸ ಪೂರ್ಣಗೊಂಡಿದೆ 1 ಕೆಲಸ ಪ್ರಗತಿಯಲ್ಲಿದೆ
3	5054 ಅಪೆಂಡಿಕ್ಸ್–ಇ ನಲ್ಲಿನ ಕಾಮಗಾರಿ	7	680.00	201.01	1 ಕೆಲಸ ಪೂರ್ಣಗೊಂಡಿದೆ 3 ಕೆಲಸ ಪ್ರಗತಿಯಲ್ಲಿದೆ 3 ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ
4	5054 ಎಸ್‌ಸಿಪಿ	6	7.90	7.90	ಎಲ್ಲ ಕಾಮಗಾರಿ ಪೂರ್ಣಗೊಂಡಿವೆ
5	5054 ಎಸ್‌ಸಿಪಿ	2	3.00	3.00	ಎಲ್ಲ ಕಾಮಗಾರಿ ಪೂರ್ಣಗೊಂಡಿವೆ

ಈ) ಈ ಮೇಲೆ ತಿಳಿಸಿದ ಎಲ್ಲಾ ಕೆಲಸಗಳಿಗೆ ಈಗಾಗಲೇ ಅನುದಾನವು ಬಿಡುಗಡೆಯಾಗಿರುವುದು.

ಉ) ಈ ಮೇಲೆ ತಿಳಿಸಿದಂತೆ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ರಸ್ತೆಗಳ ಅಭಿವೃದ್ಧಿ

292 (295) ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ, ಹಳಿಯಾಳ–ಜೋಯಿಡಾ ಕ್ಷೇತ್ರದ ಜೋರಾದ್–ಸದಾಶಿವಗಡ ಹೆದ್ದಾರಿ ಸಂಖ್ಯೆ: 46ರಲ್ಲಿ 661 ಕಿ.ಮೀ. ನಿಂದ 685 ಕಿ.ಮೀ.ವರೆಗೆ ರಸ್ತೆ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಕಳೆದ 10 ವರ್ಷಗಳಿಂದಲೂ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಕಾರಣಗಳೇನು ;

ಇ) ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು ;

ಈ) ಹಾಗಿದ್ದಲ್ಲಿ, ಈ ರಸ್ತೆಯನ್ನು ಯಾವಾಗ ಅಭಿವೃದ್ಧಿಪಡಿಸಲಾಗುವುದು ; (ಮಾಹಿತಿ ನೀಡುವುದು)

ಉ) ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಯು ಅಡ್ಡಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)